ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ
ಕಾರ್ಮಿಕ ಅಧಿಕಾರಿಯವರ ಕಛೇರಿ ಉಪ ವಿಭಾಗ-5, ಬೆಂಗಳೂರು.
'ಕರ್ನಾಟಕ ಕಾರ್ಮಿಕ ಅಧ್ಯಯನ ಸಂಸ್ಥೆ' ಕಟ್ಟಡ, 2ನೇ ಮಹಡಿ, ರೂಮ್ ನಂ.21 & 22, ಸರ್ಕಾರಿ ಪ್ರೌಢ ಶಾಲೆ ಹತ್ತಿರ, ಮಂಜುನಾಥ ನಗರ, ಬಗಲಗುಂಟೆ ಬೆಂಗಳೂರು-560073. ಇ-ಮೇಲ್:labourofficer5@gmail.com.

ಸಂಖ್ಯೆ: ಕಾಅಬೆಂ-5/ಪಿಟಿಎನ್/ಇತರೆ/2025-26 ದಿನಾಂಕ: 06-11-2025

: ತುರ್ತು :

## :ಕಛೇರಿ ಆದೇಶ:

**ವಿಷಯ:-** ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಅಧಿನಿಯಮ 2013ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮತ್ತು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಜಾರಿಗೊಳಿಸುವ ಬಗ್ಗೆ.

**ಉಲ್ಲೇಖ:-** 1. ಮಾನ್ಯ ಕಾರ್ಮಿಕ ಆಯುಕ್ತರು, ಬೆಂಗಳೂರು ರವರ ನೆನಪೋಲೆ ಸಂಖ್ಯೆ: ಜಿಜೆಡ್‌ಟಿ/ಸಿಆರ್-30/2023-24, ದಿನಾಂಕ: 04-11-2025.
2. ಮಾನ್ಯ ಉಪ ಕಾರ್ಮಿಕ ಆಯುಕ್ತರು, ಪ್ರಾದೇಶಿಕ-1, ಬೆಂಗಳೂರು ಇವರ ಮೌಖಿಕ ಆದೇಶ ದಿನಾಂಕ: 06-11-2025

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು Miscellaneous Application No.22553/2023 ಪ್ರಕರಣದಲ್ಲಿ ದಿನಾಂಕ:12.08.2025 ರಂದು ಆದೇಶ ಹೊರಡಿಸಿದ್ದು, ಅದರಂತೆ 10 ಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಂಡಿರುವ ಎಲ್ಲಾ ವಾಣಿಜ್ಯ ಸಂಸ್ಥೆಗಳು / ಉದ್ದಿಮೆಗಳು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಅಧಿನಿಯಮ-2013ರ ಆಂತರಿಕ ದೂರು ಸಮಿತಿಗಳು ರಚನೆಯಾಗಿರುವುದನ್ನು ಖಾತರಿಪಡಿಸಿಕೊಂಡು ಈ ಬಗ್ಗೆ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಪಡೆದು ಜಿಲ್ಲಾಡಳಿತಕ್ಕೆ ವರದಿಯನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ ಹಾಗೂ ಈ ಸಂಬಂಧ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಇವರು ದಿನಾಂಕ: 14-10-2025 ರಂದು ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿದಂತೆ ಆಯಾ ಜಿಲ್ಲೆಯಲ್ಲಿನ ಸರ್ಕಾರಿ, ಸಾರ್ವಜನಿಕ /ಖಾಸಗಿ ವಲಯದ ಎಲ್ಲಾ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳು ರಚನೆ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸರ್ವೇ ಮಾಡುವಂತೆ ಮತ್ತು She-Box Portal ನಲ್ಲಿ ಲಭ್ಯವಿರುವ ಮಾಹಿತಿಯನ್ನು ಪರಿಶೀಲಿಸಲಾಗಿ ಇನ್ನು ಹೆಚ್ಚು ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಯನ್ನು ರಚನೆ ಮಾಡದೇ ಇರುವುದು ಕಂಡು ಬಂದಿರುತ್ತದೆ.

ಆದಕಾರಣ ಇನ್ನೂ ಆಂತರಿಕ ದೂರು ಸಮಿತಿಯನ್ನು ರಚನೆ ಮಾಡದೇ ಇರುವ ಖಾಸಗಿ ಸಂಸ್ಥೆ ಹಾಗೂ ಉದ್ದಿಮೆಗಳಲ್ಲಿ ತುರ್ತಾಗಿ ಸಮಿತಿ ರಚಿಸಿ ಮತ್ತು ಈಗಾಗಲೇ ರಚನೆ ಮಾಡಿರುವ ಸಮಿತಿಗಳ ಮಾಹಿತಿಯೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ

7-11-25

ಸಾಧಿಸಿ She-Box Portal ನಲ್ಲಿ ಮಾಹಿತಿಯನ್ನು ಅಳವಡಿಸಿರುವುದನ್ನು ಖಾತರಿಪಡಿಸಿಕೊಂಡು ಈ ಬಗ್ಗೆ ಜಿಲ್ಲಾಡಳಿತಕ್ಕೆ ವರದಿಯನ್ನು ಸಲ್ಲಿಸುವಂತೆ ಮಾನ್ಯ ಕಾರ್ಮಿಕ ಆಯುಕ್ತರು, ಬೆಂಗಳೂರು ರವರು ಉಲ್ಲೇಖದನ್ವಯ ಸೂಚಿಸಿರುತ್ತಾರೆ.

ಆದ್ದರಿಂದ ಸದರಿ ನೆನಪೋಲೆ ಪತ್ರದ ಪ್ರತಿಯೊಂದಿಗೆ ನಿಮ್ಮ ಕಾರ್ಯವ್ಯಾಪ್ತಿಗೆ ಬರುವ ಸಂಸ್ಥೆಗಳ ಪಟ್ಟಿಯನ್ನು ಅಡಕಗೊಳಿಸಿದ್ದು, ಮಾನ್ಯ ಕಾರ್ಮಿಕ ಆಯುಕ್ತರು ನೀಡಿರುವ ನಿರ್ದೇಶನದಂತೆ ಸದರಿ ಸಂಸ್ಥೆಗಳಿಗೆ ಭೇಟಿ ನೀಡಿ ಆಂತರಿಕ ದೂರು ಸಮಿತಿ (Internal Complaint Committee) ಯನ್ನು ರಚಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಹಾಗೂ ಸಮಿತಿಯನ್ನು ರಚಿಸದೇ ಇದ್ದಲ್ಲಿ ತುರ್ತಾಗಿ ಸಮಿತಿಯನ್ನು ರಚಿಸಿ She-Box Portal ನಲ್ಲಿ ಮಾಹಿತಿಯನ್ನು ಅಳವಡಿಸಲು ಸಂಸ್ಥೆಗಳಿಗೆ ನಿರ್ದೇಶನ ನೀಡುವಂತೆ ಸೂಚಿಸಿದೆ. ಮುಂದುವರೆದು ಸಂಸ್ಥೆಗಳು ಸಮಿತಿಯನ್ನು ರಚಿಸಿ She-Box Portal ನಲ್ಲಿ ಅಳವಡಸದೇ ಇದ್ದಲ್ಲಿ, ಸದರಿ ಸಂಸ್ಥೆಗಳು ಸಹ She-Box Portal ನಲ್ಲಿ ಮಾಹಿತಿಯನ್ನು ಅಳವಡಿಸಲು ಕ್ರಮ ಕೈಗೊಂಡು, ವರದಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಈ ಮೂಲಕ ಸೂಚಿಸಿದೆ.

Shashikala

ಕಾರ್ಮಿಕ ಅಧಿಕಾರಿ,
ಉಪವಿಭಾಗ-5, ಬೆಂಗಳೂರು

6/11/2025

**ಇವರಿಗೆ:-**

ಹಿರಿಯ ಕಾರ್ಮಿಕ ನಿರೀಕ್ಷಕರು 3,6,7,16,24,31 ಹಾಗೂ 40ನೇ ವೃತ್ತ, ಬೆಂಗಳೂರು.

## ನಮೂನೆ

| ಕ್ರ. ಸಂ | ಜಿಲ್ಲೆಯ ಹೆಸರು | 10 ಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಕಾತಿ ಮಾಡಿಕೊಂಡಿರುವ ಸಂಸ್ಥೆ/ ಉದ್ದಿಮೆಯ ಹೆಸರು ವಿಳಾಸ ಮತ್ತು ಇ-ಮೇಲ್ | ಕಾರ್ಮಿಕರ ಸಂಖ್ಯೆ | | ಆಂತರಿಕ ದೂರು ಸಮಿತಿ ರಚನೆಯಾಗಿದೆಯೇ ಅಥವಾ ಇಲ್ಲವೇ | ಆಂತರಿಕ ದೂರು ಸಮಿತಿ ರಚನೆಯಾದ ದಿನಾಂಕ ಮತ್ತು ಸಮಿತಿಯಲ್ಲಿನ ಸದಸ್ಯರ ಸಂಖ್ಯೆ | ಇದೂವರೆಗೂ ದಾಖಲಾದ ದೂರುಗಳ ಸಂಖ್ಯೆ | ಸದರಿ ದೂರಿನ ಬಗ್ಗೆ ಕೈಗೊಂಡ ಕ್ರಮ | ಷರಾ |
|---|---|---|---|---|---|---|---|---|---|
| | | | ಪುರುಷ | ಮಹಿಳೆ | | | | | |
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

ಸಂಸ್ಥೆಯ ಮುದ್ರೆ ಮತ್ತು ಸಹಿ

ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ

**Government of Karnataka: Department of Labour**

ಹಿರಿಯ ಕಾರ್ಮಿಕ ನಿರೀಕ್ಷಕರ ಕಛೇರಿ.24ನೇ ವೃತ್ತ ರೂಂ ನಂ:19 2ನೇ ಮಹಡಿ ಸರ್ಕಾರಿ ಹೈಸ್ಕೂಲ್/ಕನಾಮೆಟಲ್ ಫ್ಯಾಕ್ಟರಿ ಹಿಂಬಾಗ ಮಂಜುನಾಥನಗರ ಬಾಗಲಗುಂಟೆ ಬೆಂಗಳೂರು-73.

ಮೊ:9986478847 ಇ-ಮೇಲ್:sli.circle24.bng@gmail.com

ಸಂ/ಹಿಕಾನಿ-24/ಸೂಪ/Posh Act/2025-26 ದಿನಾಂಕ:18-11-2025

**ಸೂಚನಾ ಪತ್ರ:( NOTICE)**

ವಿಷಯ: ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇದಿಸುವಿಕೆ ಮತ್ತು ನಿವಾರಿಸುವಿಕೆ ಅಧಿನಿಯಮ -2013ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:- 1. ಮಾನ್ಯ ಸರ್ವೋಚ್ಚ ನ್ಯಾಯಾಲಯವುMiscellaneous Application No:22553/2023ರ ಪ್ರಕರಣದಲ್ಲಿ ದಿ:12.8.2025 ರಂದು ನೀಡಿರುವ ನಿರ್ದೇಶನಗಳು

2. ಮಾನ್ಯ ಕಾರ್ಮಿಕ ಆಯುಕ್ತರ ಕಛೇರಿ ಆದೇಶ ಸಂಖ್ಯೆಜಿಜೆಡ್‌ಟಿ/ಸಿಆರ್-30/2023-24 ದಿನಾಂಕ:4/11/2025

ಸಂಸ್ಥೆಯ ನೊಂದಣಿ ಪತ್ರ ಸಂ:

| ಕಾರ್ಮಿಕರ ಸಂಖ್ಯೆ | ಗಂಡು: | ಹೆಣ್ಣು: | ಒಟ್ಟು: |
|---|---|---|---|

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ನಿಮ್ಮ ಸಂಸ್ಥೆಯಲ್ಲಿ 10 ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಕಾತಿ ಮಾಡಿಕೊಂಡಿರುವ ಎಲ್ಲಾ ಅಂಗಡಿ/ವಾಣಿಜ್ಯ ಸಂಸ್ಥೆಗಳು/ಉದ್ದಿಮೆಗಳು/ಕಾರ್ಖಾನೆಗಳಲ್ಲಿ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇದಿಸುವಿಕೆ ಮತ್ತು ನಿವಾರಿಸುವಿಕೆ ಅಧಿನಿಯಮ-2013 ರನ್ವಯ ಆಂತರಿಕ ದೂರು ಸಮಿತಿ **(ICC)** ರಚನೆ ಮಾಡುವುದು ಕಡ್ಡಾಯವಾಗಿರುತ್ತದೆ. ಈ ಕುರಿತಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಹ ಉಲ್ಲೇಖ-1 ರನ್ವಯ ನಿರ್ದೇಶನ ನೀಡಿರುತ್ತದೆ.

ಅದರಂತೆ ತಮ್ಮ ಸಂಸ್ಥೆಯಲ್ಲಿ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇದಿಸುವಿಕೆ ಮತ್ತು ನಿವಾರಿಸುವಿಕೆಅಧಿನಿಯಮ -2013 ರಕಾಯ್ದೆಯ ಸೆಕ್ಷನ್ 26 ರ ಪ್ರಕಾರ ಹಾಗೂ Sub Section 1 of sec 4 ರ ಪ್ರಕಾರ ತಮ್ಮ ಸಂಸ್ಥೆಯಲ್ಲಿ ಆಂತರಿಕ ದೂರು ಸಮಿತಿಯನ್ನು ಈ ಪತ್ರ ತಲುಪಿದ 03 ದಿನಗಳೊಳಗೆ ರಚನೆ ಮಾಡಿ ಅಥವಾ ಈಗಾಗಲೆ ರಚನೆ ಮಾಡಿದ್ದರೆ ಸದರಿ ಮಾಹಿತಿಯನ್ನು ಅಂತರ್ ಜಾಲದ **She Box Portal** ನಲ್ಲಿ ಅಳವಡಿಸಿ ಹಾಗೂ ಈ ಪತ್ರದೊಂದಿಗೆ ಲಗ್ಗತ್ತಿಸಿದ ನಮೂನೆಯಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಗೆ ಮಾಹಿತಿಯನ್ನು ಇಮೇಲ್/ವಾಟ್ಸ ಆಫ್ ಮೂಲಕ ನೀಡಬೇಕೆಂದು ಈ ಮೂಲಕ ಸೂಚಿಸಿದೆ.

ಮುಂದುವರೆದು ಆಂತರಿಕ ದೂರು ಸಮಿತಿ ರಚನೆ ಮಾಡದ ಸಂಸ್ಥೆಗಳ ಮತ್ತು ರಚನೆ ಮಾಡಿದ ಬಗ್ಗೆ ಮಾಹಿತಿ ನೀಡದೆ ಇರುವ ಸಂಸ್ಥೆಗಳ ಬಗ್ಗೆ ಮಾನ್ಯ ನಗರ ಜಿಲ್ಲಾಧಿಕಾರಿಗಳು ಬೆಂಗಳೂರು ಇವರಿಗೆ ಮಾಹಿತಿ ನೀಡಿ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಈ ಮೂಲಕ ಸೂಚಿಸಿದೆ.

ಹಿರಿಯ ಕಾರ್ಮಿಕ ನಿರೀಕ್ಷಕರು,
24ನೇ ವೃತ್ತ, ಬೆಂಗಳೂರು

ಹಿರಿಯ ಕಾರ್ಮಿಕ ನಿರೀಕ್ಷಕರು
24 ನೇ ವೃತ, ಬೆಂಗಳೂರು